**ಕರ್ನಾಟಕ ಸರ್ಕಾರ**
**ಕುಲಸಚಿವರ ಕಾರ್ಯಾಲಯ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ,**
**4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು-560 041.**

ಸಂಖ್ಯೆ: ಆಪ್ತಶಾಖೆ. /2015-16 ದಿನಾಂಕ : 05/06/15

**ಸುತ್ತೋಲೆ**

**ವಿಷಯ:** ಶಿಕ್ಷಕರ ದಿನಾಚರಣೆ ಬಾವುಟಗಳ ಮಾರಾಟದಿಂದ ವಂತಿಗೆ ಸಂಗ್ರಹಿಸುವ ಬಗ್ಗೆ.

*******

ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ವತಿಯಿಂದ ಪ್ರತಿ ವರ್ಷವೂ ಸೆಪ್ಟಂಬರ್ 5 ರಂದು ಶಿಕ್ಷಕರ ದಿನಾಚರಣೆ ಆಚರಿಸಲಾಗುತ್ತಿದೆ. ಇದರ ಅಂಗವಾಗಿ ಹೊರತರುವ ದಿವಂಗತ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ರವರ ಭಾವಚಿತ್ರವುಳ್ಳ ಬಾವುಟಗಳನ್ನು ವಿದ್ಯಾರ್ಥಿ ಹಾಗೂ ಶಿಕ್ಷಕ ವರ್ಗದವರಿಗೆ ಮಾರಾಟ ಮಾಡಿ ಇದರಿಂದ ಬರುವ ವಂತಿಗೆಯಿಂದ ವಿದ್ಯಾರ್ಥಿಗಳ ಹಾಗೂ ಶಿಕ್ಷಕ ವರ್ಗದವರಿಗೆ ಹಲವಾರು ಉಪಯುಕ್ತವಾದಂತಹ ಕಲ್ಯಾಣ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಇದಕ್ಕೆ ಪ್ರೋತ್ಸಾಹ ಮಾಡುವುದರ ಮೂಲಕ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದ ಘನತೆಯನ್ನು ಹೆಚ್ಚಿಸುವುದು ರಾಜ್ಯದಲ್ಲಿರುವ ಪ್ರತಿಯೊಬ್ಬ ಶಿಕ್ಷಕರ ಜಾವಾಬ್ದಾರಿಯಾಗಿದೆ.

ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಪದನಿಮಿತ್ತ ಕಾರ್ಯದರ್ಶಿ/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ, ಬೆಂಗಳೂರು ಇವರ ಕಛೇರಿಯಿಂದ ಸರಬರಾಜು ಮಾಡಿರುವ ಶಿಕ್ಷಕರ ದಿನಾಚರಣೆ ಬಾವುಟಗಳನ್ನು (ನಿಮ್ಮ ವಿದ್ಯಾ ಸಂಸ್ಥೆಯ ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಸಂಖ್ಯೆಗೆ ಅನುಗುಣವಾಗಿ) ಕಡ್ಡಾಯವಾಗಿ ಮಾರಾಟ ಮಾಡಿ ವಂತಿಗೆಯನ್ನು ಸಂಗ್ರಹಿಸುವುದು. ಹೀಗೆ ಸಂಗ್ರಹಿಸಿದ ವಂತಿಗೆಯನ್ನು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ, ಬೆಂಗಳೂರು ಇವರ ಖಾತೆಗೆ ಪಾವತಿಮಾಡುವಂತೆ ತಿಳಿಸಿದೆ. ಯಾವುದೇ ಕಾರಣಕ್ಕೂ ಬಾವುಟಗಳನ್ನು ಮಾರಾಟ ಮಾಡದೆ ಹಿಂದಿರುಗಿಸಬಾರದೆಂದು ಈ ಮೂಲಕ ತಿಳಿಸಿದೆ.

ದಾಖಲಾತಿ ಸಮಯದಲ್ಲಿ ವಿದ್ಯಾರ್ಥಿಗಳಿಂದ ವಂತಿಗೆ ರೂಪದಲ್ಲಿ ಇತರೆ ಶುಲ್ಕಗಳೊಂದಿಗೆ ವಸೂಲಿ ಮಾಡುವುದು. ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿ (KSTBF) ರೂ.25/- ರಂತೆ, ಕರ್ನಾಟಕ ರಾಜ್ಯ ವಿದ್ಯಾರ್ಥಿಗಳ ಕ್ಷೇಮಾಭಿವೃದ್ಧಿ ನಿಧಿ (KSSWF) ರೂ.25/- ರಂತೆ ಮತ್ತು ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನ (NFTW) ಶಿಕ್ಷಕರಿಂದ ರೂ.40/- ವಿದ್ಯಾರ್ಥಿಗಳಿಂದ ರೂ.20/- ರಂತೆ ವಂತಿಗೆಯನ್ನು ಚಲನ್ ಮೂಲಕ ರಾಜ್ಯದ ಯಾವುದೇ ಎಸ್.ಬಿ.ಎಂ. ಬ್ಯಾಂಕ್‌ನಲ್ಲಿ ಅಥವಾ ಬ್ಯಾಂಕ್ ಹುಂಡಿ ಮೂಲಕ ನಿಧಿಗಳ ಮೂರು ಖಾತೆಗಳಿಗೆ ಪ್ರತ್ಯೇಕವಾಗಿಯೇ ಹಣ ಜಮಾ ಮಾಡುವುದು. ಮೂರು ಖಾತೆಗಳ ವಿವರ ನೀಡಿ ಈ ಸಂಬಂಧ ಯಾವುದೇ ಸ್ಪಷ್ಟೀಕರಣವನ್ನು "ಕಾರ್ಯದರ್ಶಿ/ಖಜಾಂಚಿಗಳು, ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಗಳ ಕಛೇರಿ, ಶಿಕ್ಷಕರ ಸದನ, ಕಾವೇರಿ ಭವನದ ಎದುರು, ಕೆಂಪೇಗೌಡ ರಸ್ತೆ, ಬೆಂಗಳೂರು-560 002," ಇವರೊಂದಿಗೆ ನೇರ ಪತ್ರ ವ್ಯವಹಾರವನ್ನು ಮಾಡುವುದು.

ದೂರವಾಣಿ ಸಂಖ್ಯೆ: 080-22483434, ಫ್ಯಾಕ್ಸ್ ಸಂಖ್ಯೆ: 080-22483860, e- mail ID: kstbf63@gmail.com

**ಕುಲಸಚಿವರು**
ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ,
ಬೆಂಗಳೂರು-41.

**ಪ್ರತಿಯನ್ನು:**

ರಾಜ್ಯದ ಎಲ್ಲಾ ವೈದ್ಯಕೀಯ, ನರ್ಸಿಂಗ್, ಪ್ಯಾರಾ ಮೆಡಿಕಲ್ ಮತ್ತು ಫಾರ್ಮಸಿ ಶಿಕ್ಷಣ ಸಂಸ್ಥೆಗಳ ಪ್ರಾಂಶುಪಾಲರಿಗೆ ಮುಂದಿನ ಸೂಕ್ತ ಕ್ರಮಕ್ಕಾಗಿ.